ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMI0SCH2/6/2022

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560001.
ದಿನಾಂಕ: 21-11-2022.

:: ಸುತ್ತೋಲೆ ::

**ವಿಷಯ :** 2022-23ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ಇಲಾಖೆಯ ಪ್ರವೇಶಾತಿ ಪೋರ್ಟಲ್‌ನಲ್ಲಿ ಅಪಡೇಟ್ ಮಾಡುವ ಬಗ್ಗೆ.

-0000000-

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಎಲ್ಲಾ ವರ್ಗದ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅನುವು ಮಾಡಿಕೊಡಲು, ವಿದ್ಯಾರ್ಥಿಗಳ ಮಾಹಿತಿಯನ್ನು Webservice ಮೂಲಕ ಎಸ್.ಎಸ್.ಪಿ ವಿಭಾಗಕ್ಕೆ ಕಳುಹಿಸಬೇಕಾಗಿರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರವೇಶಾತಿ ಪೋರ್ಟಲ್‌ನಲ್ಲಿ 01, 03ನೇ & 5ನೇ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು https://dtetech.karnataka.gov.in/dteone/Index.aspx ಪೋರ್ಟಲ್‌ನಲ್ಲಿ ಅಪಡೇಟ್ ಮಾಡಲು ಸೂಚಿಸಲಾಗಿದೆ. ಹಾಗೂ ಸದರಿ ವಿಷಯದ ಬಗ್ಗೆ **ದಿನಾಂಕ : 22-11-2022** ರಂದು ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಅಪರಾಹ್ನ : 3.30 ರಿಂದ 04.30 ಮತ್ತು ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಅಪರಾಹ್ನ : 02.30 ರಿಂದ 03.30 ಘಂಟೆಯ ವರೆಗೆ **Video Conference** ಅನ್ನು ಏರ್ಪಡಿಸಲಾಗಿದೆ. ಪಾಲಿಟೆಕ್ನಿಕ್ ಪ್ರಾಂಶುಪಾಲರು, ಎಸ್.ಎಸ್.ಪಿ ಸಂಯೋಜಕ ಅಧಿಕಾರಿ ಮತ್ತು ಸಂಬಂಧಿಸಿದ ಸಿಬ್ಬಂದಿ ವರ್ಗದವರು ಸದರಿ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಈ ಮೂಲಕ ತಮ್ಮಗೆ ತಿಳಿಯಪಡಿಸಿದೆ.

21/11/22

ಸಹಾಯಕ ನಿರ್ದೇಶಕರು (ಎಂ.ಪಿ.ಸಿ)

ಇವರಿಗೆ,

1. ಪ್ರಾಂಶುಪಾಲರು, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ.
2. ಇ-ಆಡಳಿತ ವಿಭಾಗಕ್ಕೆ, ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು.